೧	೨	೩
೮೪	ಶ್ರೀ ಡಿ.ಬಿ. ನಾಯ್ಕ್, ಡಿ.ಸಿ.ಎಫ್.	ಬಿ
೮೫	ಶ್ರೀ ಬಿ.ಎಂ. ಹೋಸಾಳಿಕರ್, ಸಹಾಯಕ ಶಿಕ್ಷಣಾಧಿಕಾರಿ.	ಬಿ
೮೬	ಶ್ರೀ ಎಸ್.ವಿ. ಹೆಗಡೆ, ಪ್ರೊಜೆಕ್ಟ್ ಆಫೀಸರ್.	ಬಿ
೮೭	ಶ್ರೀ ಎಚ್.ವಿ. ಕಾನಡೆ, ವೈದ್ಯಾಧಿಕಾರಿ.	ಬಿ
೮೮	ಶ್ರೀ ಎಸ್.ಕೆ. ನಾಯ್ಕ್, ವೈದ್ಯಾಧಿಕಾರಿ	ಬಿ
೮೯	ಶ್ರೀ ಬಿ.ಜೆ. ನಾಯ್ಕ್, ಇ.ಇ.ಓ.	ಬಿ
೯೦	ಶ್ರೀ ಆರ್.ಕೆ. ಜೋರ್ಕರ್, ತಹಶೀಲ್ದಾರ್.	ಬಿ

ಸವದತ್ತಿ ತಾಲ್ಲೂಕಿನಲ್ಲಿ ಬಸ್ ನಿಲ್ದಾಣದ ನಿರ್ಮಾಣ ಯೋಜನೆ

೨೩೪೬. ಶ್ರೀ ಚಂದ್ರಶೇಖರ್ ಮಾಮನಿ(ಪರಸಗಡ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನ ಸತ್ತಿಗೇರಿ, ಹೂಲಿಕಟ್ಟಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ ? ಹಾಗಿದ್ದಲ್ಲಿ ಸದರೀ ಕಾಮಗಾರಿಗಳನ್ನು ಪ್ರಾರಂಭಿಸುವುದು ಯಾವಾಗ :

ಆ) ಸವದತ್ತಿಯಿಂದ ಮುಂಬಯಿ ಮತ್ತು ಮಂತ್ರಾಲಯ ಬಸ್ಸು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿಯೇ :ಹಾಗಿದ್ದಲ್ಲಿ ಸೂರೀ ಬಸ್ಸುಗಳನ್ನು ಪ್ರಾರಂಭಿಸಲುಸರ್ಕಾರವು ಕೈಗೊಂಡ ಕಮವೇನು ?

ಇ) ಸವದತ್ತಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಮುಂದೆ ಷಾಪಿಂಗ್ ಕಾಂಪ್ಲೆಕ್ಸ್ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ? ಹಾಗಿದ್ದಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವುದು ಯಾವಾಗ :

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಾರಿಗೆ ಮಂತ್ರಿಗಳು.—

ಅ) ಇಲ್ಲ

ಆ) ಹೌದು,

ಸವದತ್ತಿಯಿಂದ ಮುಂಬಯಿ, ಮತ್ತು ಮಂತ್ರಾಲಯಗಳಿಗೆ ಬಸ್ಸು ಓಡಿಸಲು ಮನವಿಗಳು ಬಂದಿವೆ, ಸವದತ್ತಿ– ಮುಂಬಯಿ ಬಸ್ಸಿನ ಬಗ್ಗೆ ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಲಾಗುವುದು. ಬೈಲಹೊಂಗಲ–ಮಂತ್ರಾಲಯ ಬಸ್ಸು ಸವದತ್ತಿಯ ಮಾರ್ಗ ಓಡುತ್ತಿರುವುದರಿಂದ ಪ್ರತ್ಯೇಕ ಸವದತ್ತಿ–ಮಂತ್ರಾಲಯ ಬಸ್ಸಿನ ಅವಶ್ಯಕತೆ ಕಂಡು ಬಂದಿಲ್ಲ.

ಇ) ಈ ಯೋಜನೆಯ ಪರಿಶೀಲನೆಯಲ್ಲಿದೆ.

ಸವದತ್ತಿ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವುದು

೨೩೪೭. ಶ್ರೀ ಚಂದ್ರಶೇಖರ್ ಮಾಮನಿ(ಪರಸಗಡ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನ ಶಿರಸಂಗಿ ಅಸುಂಡಿ ಇನಾಂಹೊಂಗಲ್ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಅಲ್ಲಿನ ಗ್ರಾಮಸ್ಥರು ಸರ್ಕಾರದ ನೇಮಕದ ಪ್ರಕಾರ